# ಪ್ರತಿ ಚಿಗುರಿಗೂ ನೆನಪಿನ ಹಂಗು

ಕೊಂಬೆ–1

ಭೂಮಿ ತಿರುಗುವ ಸದ್ದು ಕೇಳಿ ದಿಢೀರನೆ ಎಚ್ಚರಗೊಂಡೆ. ಇತ್ತೀಚೆಗೆ ನನ್ನ ಆತಂಕ ಎಷ್ಟೊಂದು ಅಧಿಕಗೊಂಡಿದೆಯೆಂದರೆ ಒಂದೊಂದು ಸಣ್ಣ ಸದ್ದಿಗೂ ನಾನು ಬೆಚ್ಚಿಬೀಳುತ್ತಿದ್ದೇನೆ. ಬಹುಶಃ ಈ ಕಾಲದ ಗುಣವೇ ಕಾರಣವಿರಬೇಕು. ತಾಳ್ಮೆಯೆಂಬುದು ಯಾರಿಗೂ ಇಲ್ಲ. ಎಲ್ಲರೂ ಅವಸರದ ಬೆನ್ನೇರಿ ಕುಳಿತಿದ್ದಾರೆ.

ಕಣ್ಣು ಬಿಟ್ಟು ನೋಡಿದರೆ ಎದುರಿಗೆ ಬೃಹದಾಕಾರದ ಕ್ರೇನು ನಿಂತಿದೆ! ಯಾವ ಕಡೆಯಿಂದ ಮುಕ್ಕಲಿ ಎಂದು ನನ್ನ ಸುತ್ತ ಪ್ರದಕ್ಷಿಣೆ ಹಾಕುತ್ತಿದೆ! ಅಷ್ಟೇ ಆಗಿದ್ದರೆ ಯಾರೋ ಡ್ರೈವರು ನನ್ನ ನೆರಳಲ್ಲಿ ಗಾಡಿ ನಿಲ್ಲಿಸಲು ಬಂದಿರುವನೆಂದುಕೊಂಡು ಸುಮ್ಮನಾಗಿಬಿಡುತ್ತಿದ್ದೆ. ಆದರೆ ಅದರ ಜೊತೆಗೆ ಬಂದಿದ್ದ ನಾಲ್ಕೈದು ಜೆಸಿಬಿಗಳು, ಯಾಂತ್ರಿಕ ಗರಗಸಗಳು, ಹತ್ತಾರು ಲಾರಿಗಳು, ನೂರಾರು ಮಂದಿ ಡಾಕುಗಳಂಥ ಕಟುಕರು! ಅವರೆಲ್ಲ ನನ್ನ ರೆಕ್ಕೆಗಳನ್ನು, ಕಾಂಡವನ್ನು ಹೇಗೆ ಕತ್ತರಿಸಿ, ತುಂಡರಿಸಿ ಬಾಡಿನಂತೆ ಪಾಲು ಹಾಕಬೇಕು ಎಂದು ಎಣಿಸುತ್ತಿದ್ದಾರೆ. ಹಿಟಾಚಿಗಳಂತೂ ಪಿಶಾಚಿಗಳಂತೆ ಬಲವಾದ ನನ್ನ ಬೇರುಗಳನ್ನು ಕೀಳಲು ಹೋಗಿ ಮುಗ್ಗರಿಸುವಾಗ ಹೇಗೆ ಉಡದಂತೆ ನೆಲವನ್ನು ಅವುಚಿಕೊಳ್ಳಬೇಕು ಎಂದೆಲ್ಲ ಲೆಕ್ಕ ಹಾಕುತ್ತಿದ್ದರೆ, ಹತ್ತು ಚಕ್ರದ ಲಾರಿಗಳು ನನ್ನ ಬುಡಕ್ಕೆ ರಿವರ್ಸ್ ಬಂದು, ಕಡಿದ ಸೌದೆಗಳನ್ನು ತುಂಬಿಕೊಳ್ಳಲು ಸುಲಭವಾಗುವಂತೆ, ಬೆನ್ನು ಆನಿಸಿಕೊಂಡು ನಿಂತಿವೆ. ಇನ್ನೇನು ಈಗಲೋ ಆಗಲೋ ನನ್ನ ಬುಡವನ್ನು ಕಚ್ಚಿ ಕೊಚ್ಚಿ ತಿನ್ನಲೆಂದು ಮಚ್ಚು ಕೊಡಲಿಗಳೂ ಹಲ್ಲು ಮಸೆದು ನಯಗೊಳಿಸಿಕೊಂಡು, ತೋಳಗಳಂತೆ, ಸೀಳುನಾಯಿಗಳಂತೆ ಮುಗಿಬೀಳಲು ಕಮ್ಯಾಂಡರನ ಆದೇಶಕ್ಕಾಗಿ ಕಾದು ಕುಳಿತಂತೆ ತುದಿಗಾಲಲ್ಲಿ ನಿಂತಿವೆ...

ಇಷ್ಟೆಲ್ಲ ಏಕೆಂದರೆ ಈ ನವ ನಾಗರಿಕನೆಂಬ ಮನುಷ್ಯ ನಿರ್ಮಿಸಬೇಕೆಂದುಕೊಂಡಿರುವ ಫ್ಲೈಓವರ್‌ಗೆ ನಾನು ಅಡ್ಡಿಯಾಗಿದ್ದೇನಂತೆ... ನನ್ನ ಕೊಂಬೆಗಳು, ಬೇರುಗಳು ಮನಸ್ಸಿಗೆ ಬಂದಂತೆ ಎತ್ತೆತ್ತಲೋ ಹರಡಿಕೊಂಡು ಅಡ್ಡಾದಿಡ್ಡಿಯಾಗಿ ಬೆಳೆದು ನಿಂತಿದ್ದಾವಂತೆ... ನನ್ನ ರೆಂಬೆಗಳು ಆಗಾಗ್ಗೆ ಮುರಿದು ಬಿದ್ದು ನೂರಾರು ಜನ ಪ್ರಾಣಾಪಾಯಕ್ಕೆ ಸಿಲುಕಿ ನಲುಗಿದ್ದಾರಂತೆ... ಫಾಲ್ಗುಣದಲ್ಲಿ ಉದುರಿಬೀಳುವ ಹಣ್ಣೆಲೆಗಳು ಮಾಗಿ ಕಳಿತು, ಕೊಳೆತು, ವಾಹನಗಳ ಚಕ್ರಗಳಡಿ ಸಿಲುಕಿ ಬ್ರೇಕು ಹಿಡಿಯದೇ ಅನೇಕ ಅಪಘಾತಗಳಾಗಿವೆಯಂತೆ... ನನ್ನ ಬೇರುಗಳು ನೆಲದಾಳದಿಂದ ಹುದುಗಿ ಬಂದು, ಬಲಿತು

